

ಕತ್ತಲಲ್ಲಿ ಕಂಗೊಳಿಸುವ 'ಲಂಡನ್ ಐ'




ಥೇಮ್ಸ್ ನದಿಯ ಲಾಂಚ್ ಪಯಣದಲ್ಲಿ 'ಲಂಡನ್ ಐ' ಕಣ್ತುಂಬಿಕೊಳ್ಳುವ ಪ್ರವಾಸಿಗರು




ತೊಟ್ಟಿಲಲ್ಲಿ ಜೀಕುತ್ತಾ ಲಂಡನ್ ನಗರದ ಚೆಲುವು ಸವಿಯುವ ಸುಖ

ನಗರ ಸುತ್ತುವಾಗ ನಮ್ಮ ಜಾತ್ರೆಗಳಲ್ಲಿ ಈಗಲೂ ಕಾಣಸಿಗುವ, ತಿರುಗುವ ಚಕ್ರದ, ಹತ್ತಾರು ಪಟ್ಟು ದೊಡ್ಡದೂ ಎತ್ತರದ್ದೂ ಆದ ಚಕ್ರವೊಂದು ನಿಮ್ಮ ಗಮನ ಸೆಳೆಯದಿದ್ದರೆ ನಿಮ್ಮಲ್ಲೇನೋ ದೋಷವಿದೆ!

ಥೇಮ್ಸ್ ನದಿ ದಂಡೆ ಮೇಲೆ 1999ರ ಡಿಸೆಂಬರ್ 31ರಂದು ಅಂದಿನ ಪ್ರಧಾನಿ ಟೋನಿ ಬ್ಲೇರ್ ಅವರಿಂದ ಉದ್ಘಾಟಿಸಲಾದ 'ಲಂಡನ್ ಐ'ಯನ್ನು 'ಮಿಲೇನಿಯಮ್ ವೀಲ್' ಎಂದು ಕರೆಯಲಾಗಿದೆ. 'ಲಂಡನ್ ಐ' 135 ಮೀಟರ್, ಅಂದರೆ 443 ಅಡಿ ಎತ್ತರವಿದೆ. 2100 ಟನ್ ತೂಕವಿದೆ.

ಲಂಡನ್ ನಗರದ ಎಲ್ಲ ಮೂಲೆಗಳಿಂದಲೂ ಇದು ಕಾಣುತ್ತದೆ ಹಾಗೂ ಇದರ ಮೇಲಿಂದ 40 ಕಿಲೋ ಮೀಟರ್‌ಗಳವರೆಗೆ ಲಂಡನ್ ನಗರವನ್ನು ವೀಕ್ಷಿಸಬಹುದಾಗಿದೆ. ಕೆಳಗೆ ನೋಡಿದರೆ ಅಬ್ಬರದಲ್ಲಿ ಹರಿಯುವ ಥೇಮ್ಸ್ ನದಿ, ಅದರ ಮಡಿಲೊಳಗೆ ಪ್ರವಾಸಿಗರಿಂದ ತುಂಬಿ ತುಳುಕುವ ಲಾಂಚ್‌ಗಳು, ದಂಡೆ ಮೇಲೆ ನೀರಿಗಿಂತ, ಸೋವಿಯಾದ ಬೀರು ಕುಡಿಯುತ್ತ ಲೋಕ ಮರೆಯುವ ಗಂಡು ಹೆಣ್ಣು ಜೋಡಿಗಳು!

'ಲಂಡನ್ ಐ'– 32 ತೊಟ್ಟಿಲುಗಳಿರುವ ದೊಡ್ಡ ಚಕ್ರ. ಪ್ರತಿಯೊಂದು ಸೆಕೆಂಡಿಗೆ 26 ಸೆಂ.ಮೀ.ಗಳಷ್ಟು ಚಲಿಸುತ್ತವೆ. ಈ ಚಕ್ರದ ಡಯಾಮೀಟರ್ 120 ಮೀಟರುಗಳು. ದೂರದಿಂದ ನೋಡಿದರೆ ಸೈಕಲ್ ರಿಮ್‌ಗಳಂತೇ ಕಾಣುವ ಈ ಚಕ್ರಕ್ಕೆ ಅರ್ಧಗಂಟೆಯ ಹೊತ್ತಿಗೆ ಒಂದು ಸುತ್ತು ಪೂರೈಸುವ 32 ತೊಟ್ಟಿಲುಗಳನ್ನು ಜೋಡಿಸಲಾಗಿದ್ದು 33 ಎಂದು ಲೆಕ್ಕ ಮಾಡಲಾಗಿದೆ (13 ಅಪಶಕುನವೆಂಬ ಪಾಶ್ಚಾತ್ಯ ನಂಬಿಕೆಯಂತೆ 13 ಸಂಖ್ಯೆಯನ್ನು ಕೈಬಿಡಲಾಗಿದೆ!). 'ಲಂಡನ್ ಐ'ಯಲ್ಲಿ ಕುಳಿತು ಒಂದು ಸುತ್ತು ಹೋಗಿ ಬರಲು 30 ನಿಮಿಷ ಬೇಕಾಗುತ್ತದೆ. ಈಗ ಲಂಡನ್ ನಗರಕ್ಕೆ ಭೇಟಿ ಕೊಡುವವರೆಲ್ಲ 'ಲಂಡನ್ ಐ' ಕಣ್ಣು ತುಂಬಿಸಿಕೊಳ್ಳದಿದ್ದರೆ ಕಣ್ಣುಗಳಿದ್ದೇನು ಪ್ರಯೋಜನ ಎನ್ನಬಹುದು!

## ಅತಿ ಎತ್ತರದ ತೊಟ್ಟಿಲು!

'ಲಂಡನ್ ಐ' ಒಂದು ಕಾಲದಲ್ಲಿ ಜಗತ್ತಿನಲ್ಲೇ ಅತ್ಯಂತ ಎತ್ತರದ ತೊಟ್ಟಿಲು ಎನಿಸಿಕೊಂಡಿತ್ತು. ಇದೀಗ ಅನೇಕ ದೇಶಗಳಲ್ಲಿ ಇಂಥ ತೊಟ್ಟಿಲು ಚಕ್ರಗಳ ಸ್ಥಾಪನೆಗೆ 'ಲಂಡನ್ ಐ' ಸ್ಫೂರ್ತಿಯಾಗಿದೆ. ಆದರೂ 'ಲಂಡನ್ ಐ' ನೋಡಲು ಬರುವವರ ಸಂಖ್ಯೆ ಏರುತ್ತಲೇ ಇದೆ. ಐದು ವರ್ಷಗಳಲ್ಲಿ ಐದು ಕೋಟಿಗೂ ಹೆಚ್ಚು ಜನ 'ಲಂಡನ್ ಐ'ಗೆ ಭೇಟಿ ನೀಡಿದ್ದು ಒಂದು ಜಾಗತಿಕ ದಾಖಲೆಯಾಗಿದೆ.

ಜಾತ್ರೆಗಳಲ್ಲಿ ಇರುವ ಜೀಕುವ ತೊಟ್ಟಿಲುಗಳಲ್ಲಿ ಕುಳಿತರೆ ತಲೆ ತಿರುಗುವ ಸಂಭವ ಇರುತ್ತದೆ. ಯಾಕೆಂದರೆ ಅವು ಬಹಳ ಎತ್ತರದಲ್ಲಿ ಅಡಿ ಮೇಲಾಗುವ ಆಟ ಆಡುತ್ತವೆ. 'ಲಂಡನ್ ಐ' ನಿಧಾನಕ್ಕೆ ತಿರುಗುವುದರಿಂದ ತಿರುಗುವುದು ಗೊತ್ತೇ ಆಗುವುದಿಲ್ಲ. ವಾಂತಿ ಬರುವ ತಾಪತ್ರಯವಿಲ್ಲ. ಫೋಟೊ ತೆಗೆದುಕೊಳ್ಳುವವರಿಗಂತೂ ಹಬ್ಬ. 'ಲಂಡನ್ ಐ' ನೋಡಲು ಶಾಲೆಗಳಿಂದ ಗುಂಪುಗುಂಪಾಗಿ ಬರುವ ಮಕ್ಕಳು, ಒಂದೊಂದು ತೊಟ್ಟಿಲಿನಲ್ಲಿ ಐವತ್ತು ಮಕ್ಕಳಾದರೂ ಇರುತ್ತಾರೆ. ಉದ್ದುದ್ದ ಸರತಿಯಲ್ಲಿ ನಿಂತು ಈ ಮಕ್ಕಳು ಆಡುವುದನ್ನು ನೋಡುವುದೇ ಮಜಾ! ಎಲ್ಲಿ ಹೋದರೂ ಮಕ್ಕಳು ಮಕ್ಕಳೇ ಎಂಬ ಸತ್ಯ ಅರ್ಥವಾಗುತ್ತದೆ.

'ಲಂಡನ್ ಐ' ಪ್ರವೇಶ ಶುಲ್ಕ 45 ಪೌಂಡು. ಅಂದರೆ ನಾಲ್ಕೂವರೆ ಸಾವಿರ ರೂಪಾಯಿ, ದುಬಾರಿ ಅನಿಸಿದರೂ ಜೀವನದಲ್ಲಿ ಒಮ್ಮೆ ನೋಡುವ ಈ ದೃಶ್ಯವನ್ನು ತಪ್ಪಿಸಲಾಗದು!. ಪ್ರವಾಸಿಗರು ಸರತಿಯಲ್ಲಿ ನಿಲ್ಲುವ ಜಾಗದಲ್ಲಿ ಉದ್ದಕ್ಕೂ 'ಲಂಡನ್ ಐ'ನ ವಿಶೇಷಗಳ ಬಗ್ಗೆ ನೆಲದ ಮೇಲೆ ಬರೆಯಲಾಗಿದೆ. ಒಳಗೆ ಹೋಗುವ ಮೊದಲೇ ಈ ಚಕ್ರದ ಮಹತ್ವದ ಬಗ್ಗೆ ನಮಗೆ ಒಂದು ಕಲ್ಪನೆ ಬರುತ್ತದೆ. ಹಲವು ದೇಶಗಳ ಜನರೊಟ್ಟಿಗೆ ಸರತಿಯಲ್ಲಿ ಕಾಯುವುದೇ ಭಿನ್ನ ಅನುಭವ!

ಪ್ರತಿಕ್ರಿಯಿಸಿ: feedback@sudha.co.in